ಓ.ಎಸ್.ನಂ.122-2023

ಪಿ.ಡಬ್ಲು-೧

ದಿ:09.09.2025 ರಂದು ವಾದಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು</u>**: ಪ್ರತಿವಾದಿಗಳ ಪರ ಶ್ರೀಯುತ ಎಸ್.ಡಿ.ಜಿ. ವಕೀಲರಿಂದ.

3. ಸರ್ವೆ ನಂ.162/2 ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 18 ಮತ್ತು 19 ನಿವೇಶನಗಳು ಯಾವ ಸರ್ವೆ ನಂಬರ್ ನಲ್ಲಿ ಇರುತ್ತವೆ ಎಂದು ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 18 ಮತ್ತು 19 ನಿವೇಶನಗಳನ್ನು ಖರೀದಿಸುವ ಪೂರ್ವದಲ್ಲಿ ಮಾಲೀಕರ ಕ್ರಯ ಪತ್ರ ಮತ್ತು ಬಡಾವಣೆ ನಕ್ಷೆಯನ್ನು ನೋಡಿರುತ್ತೇನೆ. ಸದರಿ ಬಡಾವಣೆ ನಕ್ಷೆಯಲ್ಲಿ ಯಾವ ಸರ್ವೆ ನಂಬರ್ ನ್ನು ನಮೂದು ಮಾಡಲಾಗಿದೆ ಎಂದು ತಿಳಿದಿದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 18 ಮತ್ತು 19 ಎಂದು ನುಡಿಯುತ್ತಾರೆ. ನಿಪಿ.16 ರಲ್ಲಿ ಸರ್ವೆ ನಂ.167/2 ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ನಿಪಿ.16 ರಲ್ಲಿ ಸರ್ವೆ ನಂ.167/2 ಜಮೀನಿನ ಒಟ್ಟು ವಿಸ್ತೀರ್ಣ 1.31 ಎಕರೆ ಎಂದು ನಮೂದಿಸಲಾಗಿರುತ್ತದೆ. ಸರ್ವೆ ನಂ.167/2 ಜಮೀನಿನ ಒಟ್ಟು ವಿಸ್ತೀರ್ಣದ ಪೈಕಿ ಎಷ್ಟು ವಿಸ್ತೀರ್ಣದ ಜಮೀನ್ನನ್ನು ನಾಗರಿಕಾ ಸೌಲಭ್ಯದ ಸಲುವಾಗಿ ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.167/2 ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.167/2 ಜಮೀನಿನ ಮಾಲೀಕರು ನಾಗರಿಕ ಸೌಲಭ್ಯದ ಸಲುವಾಗಿ ಸರ್ಕಾರಕ್ಕೆ ಜಮೀನ್ನನ್ನು ಬಿಟ್ಟು ಕೊಟ್ಟ ನಂತರ ನಿಪಿ.16 ರಲ್ಲಿ ಕಾಣಿಸಿರುವಂತೆ ನಿವೇಶನಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ನಿವೇಶನ ಸಂಖ್ಯೆ 18 ರ ಉತ್ತರಕ್ಕೆ ರಸ್ತೆ ಇರುತ್ತದೆ. ನಿಪಿ.16 ರಲ್ಲಿ ನಿವೇಶನ ಸಂಖ್ಯೆ 18 ರ ಉತ್ತರಕ್ಕೆ ದಿಕ್ಕಿಗೆ ನಿವೇಶನ ಸಂಖ್ಯೆ 17 ಇರುತ್ತದೆ ಎಂದರೆ ಸರಿಯಲ್ಲ. ದಾವಾ ನಿವೇಶನ ಸಂಖ್ಯೆ 18 ರ ಪಶ್ಚಿಮಕ್ಕೆ ನಿವೇಶನ ಸಂಖ್ಯೆ 17 ಇರುತ್ತದೆ. ನಿಪಿ.16 ರಲ್ಲಿ ಕಾಣಿಸಿರುವ ಚಕ್ಕುಬಂದಿಗಳು ಸರಿ ಇರುತ್ತವೆ. ನೀವು ನಿಪಿ.16 ರಂತೆ ಕ್ರಯ ಪತ್ರ ಮಾಡಿಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಕ್ರಯ ಪತ್ರದಲ್ಲಿ ಕಾಣಿಸಿರುವ ಚಕ್ಕುಬಂದಿಗಳು ಮತ್ತು ನಿಪಿ.16 ರಲ್ಲಿ ಕಾಣಿಸಿರುವ ದಾವಾ ನಿವೇಶನದ ಚಕ್ಕುಬಂದಿಗಳಲ್ಲಿ ವ್ಯತ್ಯಾಸಗಳು ಇವೆ ಎಂದರೆ ಸರಿಯಲ್ಲ.

4. 2012 ನೇ ಸಾಲಿನಲ್ಲಿ ದಾವಾ ನಿವೇಶನಗಳನ್ನು ಖರೀದಿಸಿರುತ್ತೇನೆ. ಆ ರೀತಿ 2012 ನೇ ಸಾಲಿನಲ್ಲಿ ದಾವಾ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಸರ್ಕಾರಿ ಭೂ ಮಾಪಕರಿಂದ ಅಳತೆ ಮಾಡಿಸಿರುವುದಿಲ್ಲ ಮತ್ತು ಖಾಸಗಿ ಭೂ ಮಾಪಕರಿಂದ ಅಳತೆ ಮಾಡಿಸಿರುತ್ತೇನೆ. 2012 ನೇ ಸಾಲಿನಲ್ಲಿ ದಾವಾ ನಿವೇಶನ ಸಂಖ್ಯೆ 18 ಮತ್ತು 19 ನ್ನು ಖರೀದಿಸುವ ಸಮಯದಲ್ಲಿ ದಕ್ಷಿಣ ಮತ್ತು ಪೂರ್ವಕ್ಕೆ ಪೀಟರ್ ರವರ ನಿವೇಶನ ಇತ್ತು. ನಾನು ದಾವಾ ನಿವೇಶನಗಳನ್ನು ಅಳತೆ ಮಾಡಿಸಿದ್ದೆ ಎಂದು ಹೇಳುವ ಪೂರ್ವದಲ್ಲಿ ಬಾಜುದಾರರಿಗೆ ಯಾವುದೇ ನೋಟಿಸ್ಸು ನೀಡಿರುವುದಿಲ್ಲ. 2018 ನೇ ಸಾಲಿನಲ್ಲಿ ದಾವಾ ನಿವೇಶನಗಳ ದಕ್ಷಿಣ ಮತ್ತು ಪೂರ್ವಕ್ಕೆ ಪೀಟರ್ ರವರ ನಿವೇಶನ ಇತ್ತು ಎನ್ನುವ ಕುರಿತು ಹಿಂದಿನ ಕ್ರಯ ಪತ್ರವನ್ನು ನೋಡಿರುತ್ತೇನೆ. ಈಗ ನನಗೆ ತೋರಿಸಿದ 15 ಪಹಣಿ ಪತ್ರಿಕೆಗಳು ನಾಗರಾಜು, ಅನಂತರಾಮಯ್ಯ ಮತ್ತು ಮಂಜುನಾಥರವರ ಜಂಟಿ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಸದರಿ 15 ಪಹಣಿ ಪತ್ರಿಕೆಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾಗಿ ನಿ.ಡಿ.೧ ಎಂದು ಗುರುತಿಸಲಾಯಿತು. ನಾನು ದಾವಾ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಪ್ರತಿವಾದಿಗಳು ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿದ್ದ ಜಮೀನುಗಳನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ತಾವು ಖರೀದಿಸಿದ ಜಮೀನಿನ ಸುತ್ತ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿಯು ಕೇವಲ ದಕ್ಷಿಣ ದಿಕ್ಕಿನಲ್ಲಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಪ್ರತಿವಾದಿಗಳು ದಕ್ಷಿಣ ದಿಕ್ಕಿನಲ್ಲಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿದ ನಂತರ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ

ಎಂದರೆ ಸರಿ. ನಿಪಿ.21 ಛಾಯಾಚಿತ್ರಗಳಲ್ಲಿ ಸದರಿ ಪ್ರತಿವಾದಿಗಳು ದಕ್ಷಿಣ ದಿಕ್ಕಿನಲ್ಲಿ ಮಾತ್ರ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿದ್ದರು ಎಂದು ಹೇಳುವ ಕಾಂಪೌಂಡ್ ಗೋಡೆ ಕಂಡು ಬರುವುದಿಲ್ಲ ಎಂದರೆ ಸರಿ. ಆ ರೀತಿ ಪ್ರತಿವಾದಿಗಳು ದಕ್ಷಿಣ ದಿಕ್ಕಿನಲ್ಲಿ ಕಾಂಪೌಂಡ ಗೋಡೆ ನಿರ್ಮಿಸಿರುತ್ತಾರೆ ಎನ್ನುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಸದರಿ ದಕ್ಷಿಣ ದಿಕ್ಕಿನಲ್ಲಿನ ಅಳತೆ ಸರಿ ಇದೆ ಎಂದು ಒಪ್ಪಿಕೊಂಡ ಮೇರೆಗೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

5. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿನ ವಿಸ್ತೀರ್ಣ ಸರಿ ಇದೆ ಎಂದು ಒಪ್ಪಿ ಕಾಂಪೌಂಡ ಗೋಡೆಯನ್ನು ನಿರ್ಮಿಸಿರುತ್ತಾರೆ ಎನ್ನುವ ವಿಚಾರವನ್ನು ಕಾಣಿಸಿರುವುದಿಲ್ಲ. ಪ್ರತಿವಾದಿಗಳಿಗೆ ಸೇರಿದ ಸರ್ವೆ ನಂ.154/2ಎ ಜಮೀನಿನ ಕುರಿತು ನನಗೆ ಯಾವುದೇ ತಕರಾರು ಇರುವುದಿಲ್ಲ ಸಾಕ್ಷಿಯು ಮುಂದುವರೆದು ಪೂರ್ವ ದಿಕ್ಕಿನಲ್ಲಿ ಕಾಂಪೌಂಡ ಗೋಡೆ ನಿರ್ಮಿಸಿದ ಕುರಿತು ತಕರಾರು ಇದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.